# ವೈದ್ಯ ಬಂದ ನೋಡಿ ವೆಂಕಟನೆಂಬ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 177.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 218.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** The singer has followed these wordings fully.

ರಾಗ: ಮೋಹನ ತಾಳ: ಆದಿ

ವೈದ್ಯ ಬಂದ ನೋಡಿ – ವೆಂಕಟನೆಂಬ
ವೈದ್ಯ ಬಂದ ನೋಡಿ || ಪ ||

ವೈದ್ಯ ಬಂದನು ವೇದವೇದ್ಯ ನೋಡೀಗಲೇ
ಶ್ರೀದೇವಿ ರಮಣನು ಶ್ರೀನಿವಾಸನೆಂಬ || ಅಪ ||

ಎಷ್ಟು ದಿನದ ರೋಗಗಳೆಂಬುದ ಬಲ್ಲ
ಗಟ್ಟಿಯಾಗಿ ಧಾತು ರಸಗಳನು ಬಲ್ಲ
ಕಷ್ಟ ಬಡಿಸದಲೆನ್ನ ಭವರೋಗ ಬಿಡಿಸುವ
ಶಿಷ್ಟವಾದ ದೇಹ ಕೊಟ್ಟು ಕಾಯುವನಿವ || 1 ||

ಹೊನ್ನು – ಹಣಂಗಳ ಅನ್ನವ ಅನುಸರಿಸಿ
ತನ್ನ ದಾಸನೆಂಬ ನಿಜವ ನೋಡಿ
ಚೆನ್ನಾಗಿ ಜಿಹ್ವೆಗೆ ಸ್ವಾದವಾಗಿರುವಂಥ
ತನ್ನ ನಾಮಾಮೃತ ದಿವ್ಯ ಔಷಧವೀವ || 2 ||

ಈತ ದಿಟ್ಟೈಸಿ ನೋಡೆ ಎಳ್ಳಷ್ಟು ರೋಗವಿಲ್ಲ
ಈ ತನುವಿಗೆಂದೆಂದು ರೋಗ ಬರಲರಿಯದು
ಈತ ಅನಂತ ರೂಪದಿ ಜೀವರಿಗೆ ಮುನ್ನ
ಪ್ರೀತಿಯಿಂದಲಿ ಭವರೋಗ ಬಿಡಿಸುವ || 3 ||

ಧರ್ಮ ವೈದ್ಯನಿವ ಜಗಕ್ಕೆಲ್ಲ ಒಬ್ಬನೆ
ಮರ್ಮಬಲ್ಲ ರೋಗ ಜೀವಂಗಳ
ನಿರ್ಮಲವಾಗಿಹ ತನ್ನ ನಾಮಸ್ಮರಣೆ
ಒಮ್ಮೆ ಮಾಡಲು ಭವರೋಗ ಬಿಡಿಸುವ || 4 ||

ಅನ್ಯ ವೈದ್ಯನೇಕೆ ಅನ್ಯ ಔಷಧವೇಕೆ
ಅನ್ಯ ಮಂತ್ರ – ತಂತ್ರ – ಜಪವೇತಕೆ
ಚೆನ್ನ ಪುರಂದರ ವಿಠಲನ್ನ ನೆನೆದರೆ
ಮನ್ನಿಸಿ ಸಲಹುವ ವೈದ್ಯ ಶಿರೋಮಣಿ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಪರಮಾತ್ಮನನ್ನು ವೈದ್ಯನೆಂದು ರೂಪಿಸಿ ದಾಸರು ಈ ಪದ್ಯವನ್ನು ಬರೆದಿದ್ದಾರೆ.

**ವೇದವೇದ್ಯ** = ವೇದಗಳಿಂದ ತಿಳಿಯಲು ಸಾಧ್ಯವಾದವನು

**ಧಾತು** = ಈ ದೇಹದಲ್ಲಿ ಸಪ್ತ ಧಾತುಗಳಿವೆಯೆಂದು ವೈದ್ಯ ಶಸ್ತ್ರ ಹೇಳುತ್ತದೆ.  ಇವು ದೇಹದ ಘಟಕಗಳು.

**ರಸ** = ದೇಹದಲ್ಲಿಯ ಪ್ರವಾಹಿಗಳು

**ಶಿಷ್ಟ** = ಬಲಿಷ್ಠ ಮತ್ತು ಪವಿತ್ರ

**ಸ್ವಾದು** = ರುಚಿಕಟ್ಟು

**ಧರ್ಮವೈದ್ಯ** = ಧರ್ಮನಿಷ್ಠರಿಗೆ ಔಷಧ ಕೊಡುವವ

**Classification:** Keerthane
**Ankita:** purandara vittala
**Location:** NA
**Category:** Vishnu Stuti, Srinivasa Stuti, Mahatmya Gnyana

**Sub-Category:** Vishnu, srinivasa, Vaidya, bhava, roga, deha, bangara, rokka, nalige, amruta, dharma, Ananta, priti, Nirmala, anna, dina, oushadha, jiva, loka, mantra, veda, Lakshmi, smarane, japa,
**Pravachana:** NA
**Explanation:** Dr. A. B. Shamachar, Bengaluru.